# ಮಂಗಳೂರಿನ ರಾಮಕೃಷ್ಣ ಮಿಷನ್ ಬಾಲಕಾಶ್ರಮ

“ಶೈಶವಾವಸ್ಥೆಯಿಂದಲೇ ಮಕ್ಕಳನ್ನು ಶಕ್ತಿಶಾಲಿಯಾಗುವಂತೆ ಮಾಡಿ. ಅವರಿಗೆ ದುರ್ಬಲತೆಯನ್ನಾಗಲಿ, ಮೂಢನಂಬಿಕೆಗಳನ್ನಾಗಲಿ ಬೋಧಿಸದಿರಿ.” ಯುವ ಜನತೆಯ ಆರಾಧ್ಯದೈವ, ವೀರ ಸಂನ್ಯಾಸಿ ಸ್ವಾಮಿ ವಿವೇಕಾನಂದರ ಈ ವಾಣಿಯನ್ನೇ ಆದರ್ಶವಾಗಿರಿಸಿಕೊಂಡು ಮುನ್ನಡೆಯುತ್ತಿದೆ ಮಂಗಳೂರಿನ ಶ್ರೀರಾಮಕೃಷ್ಣ ಮಿಷನ್ ಬಾಲಕಾಶ್ರಮ.



*ಮಂಗಳೂರು ರಾಮಕೃಷ್ಣ ಮಠದ ಮುಖ್ಯ ಕಟ್ಟಡ*

ಕರಾವಳಿಯ ಮೂರು ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡುಗಳಲ್ಲಿ ಮನೆಮಾತಾಗಿರುವ ಈ ಆಶ್ರಮ ಅನ್ನದಾನ, ವಿದ್ಯಾದಾನಗಳ ಮೂಲಕ ಪ್ರತಿಭಾವಂತ, ಬಡವಿದ್ಯಾರ್ಥಿಗಳ ಪರಿಪೂರ್ಣ ವಿಕಸನಕ್ಕೊಂದು ಅಪೂರ್ವ ತಾಣ. ಸುಮಾರು ಏಳು ಎಕರೆ ವಿಶಾಲ ಪ್ರದೇಶ, ಪ್ರಶಾಂತ, ಸ್ವಚ್ಛ, ಸುಂದರ, ಪ್ರಕೃತಿ ರಮಣೀಯ ಪರಿಸರದಲ್ಲಿ ಮಕ್ಕಳ ಸರ್ವಾಂಗೀಣ ಬೆಳವಣಿಗೆಗಾಗಿ ಮೌನಕ್ರಾಂತಿ ಮಾಡುತ್ತಿರುವ ಈ ಆಶ್ರಮ ೨೦೦೧ರಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಿತು. ಇಲ್ಲಿಯ ಸ್ವಾಮೀಜಿವರ್ಯರ ನಿಸ್ಪೃಹ ಸೇವಾ ಮನೋಭಾವದಿಂದ ಶ್ರೀರಾಮಕೃಷ್ಣ ಪರಮಹಂಸ, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರ ಜೀವನ, ಸಂದೇಶಗಳು ಇಂದು ಈ ಕರಾವಳಿ ಪರಿಸರದಲ್ಲಿ ಹಬ್ಬುತ್ತಿವೆ.

ಸದೃಢ, ಸಶಕ್ತ, ಸ್ವಾವಲಂಬಿ ಸಮಾಜ ನಿರ್ಮಾಣದ ಧ್ಯೇಯದೊಂದಿಗೆ, ವಿದ್ಯಾರ್ಥಿಗಳಲ್ಲಿ ಆತ್ಮಗೌರವ, ಆತ್ಮವಿಶ್ವಾಸ, ಸಾಮಾಜಿಕ ಕರ್ತವ್ಯ, ಉತ್ತಮ ನಡತೆ ಮುಂತಾದ ಜೀವನ ಮೌಲ್ಯಗಳನ್ನು ಮೈಗೂಡಿಸುವುದರ ಮೂಲಕ ಎಲೆಮರೆಯ ಕಾಯಿಯಂತೆ ಸಮಾಜಕ್ಕೆ ಮಹೋನ್ನತ ಕೊಡುಗೆ ನೀಡುತ್ತಿದೆ ಈ ಆಶ್ರಮ. ಮಂಗಳಾದೇವಿ ದೇವಸ್ಥಾನ ರಸ್ತೆಯಲ್ಲಿರುವ ರಾಮಕೃಷ್ಣ ಮಠದ ಒಂದು ಭಾಗವಾಗಿರುವುದು ಈ ಬಾಲಕಾಶ್ರಮ.

**ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ**—ತನ್ನ ಮೋಕ್ಷ ಸಾಧನೆಯ ಜತೆಗೆ ಜಗತ್ತಿನ ಹಿತಸಾಧನೆಗೆ ಶ್ರಮಿಸಬೇಕು ಎಂಬ ಶ್ರೀರಾಮಕೃಷ್ಣ ಮಹಾಸಂಘದ ಧ್ಯೇಯವಾಕ್ಯದ ಪ್ರೇರಣೆಯೊಂದಿಗೆ ನಡೆಸಲಾಗುತ್ತಿರುವ ಈ ಆಶ್ರಮದಲ್ಲಿ ಈ ಸಾಲಿನವರೆಗೆ ೯೭೬ ವಿದ್ಯಾರ್ಥಿಗಳು ಕಲಿತು ತಮ್ಮ ಬಾಳು ರೂಪಿಸಿಕೊಂಡಿದ್ದಾರೆ.

ಬೆಳೆದು ಬಂದ ಬಗೆ: ಆಶ್ರಮದ ಕೆಲಸ ಕಾರ್ಯಗಳನ್ನು ವಿದ್ಯಾರ್ಥಿಗಳೇ ನೆರವೇರಿಸಿ ಅವರಲ್ಲಿ ವೃತ್ತಿನಿಷ್ಠೆ ಮತ್ತು ವೃತ್ತಿಗೌರವವನ್ನು ಪ್ರೇರೇಪಿಸುತ್ತಿರುವ ರಾಮಕೃಷ್ಣ ಮಠವು ಮಂಗಳೂರಿನಲ್ಲಿ ಸ್ವಂತ ಜಮೀನಿನಲ್ಲಿ ಆರಂಭವಾದದ್ದು ೧೯೫೧ರಲ್ಲಿ. ಇದಕ್ಕೆ ಮೊದಲು ೧೯೪೭ರಲ್ಲಿ ಲಾಲ್‌ಬಾಗ್‌ನಲ್ಲಿ ಬಾಡಿಗೆ ಮನೆಯಲ್ಲಿ ಸ್ವಾಮಿ ವಿಮಲಾನಂದಜಿ ನೇತೃತ್ವದಲ್ಲಿ ಆರಂಭವಾಗಿತ್ತು. ಈ ಆಶ್ರಮ ಸ್ಥಾಪನೆಯ ಹಿಂದಿರುವ ರೂವಾರಿ ದಿವಂಗತ ಸಾಹುಕಾರ್ ವೆಂಕಟೇಶ್ ಪೈ. ಹಿಂದೂ ಸೇವಾ ಸಂಘದ ವತಿಯಿಂದ ಬಾಲಕಾಶ್ರಮ ನಡೆಸುತ್ತಿದ್ದ ಅವರು ಅದನ್ನು ರಾಮಕೃಷ್ಣ ಮಠ ಮತ್ತು ಮಿಷನ್ನಿಗೆ ಒಪ್ಪಿಸಿದ್ದಲ್ಲದೆ, ಏಳು ಎಕರೆ ಜಮೀನನ್ನೂ ಧಾರೆಯೆರೆದರು. ಪೂಜೆ, ಪ್ರವಚನಗಳು ಮುಂದುವರಿಯುತ್ತಿದ್ದವು. ಬಾಲಕಾಶ್ರಮದ ಹೊಣೆಯನ್ನು ರಾಮಕೃಷ್ಣ ಮಿಷನ್ ವಹಿಸಿಕೊಂಡಿತು.

ಅನಂತರ ಸ್ವಾಮಿ ಆದಿದೇವಾನಂದಜಿಯವರು ಇಲ್ಲಿನ ರಾಮಕೃಷ್ಣ ಮಠದ ಅಧ್ಯಕ್ಷರಾಗಿ ಶ್ರೀರಾಮಕೃಷ್ಣ ಮತ್ತು ವಿವೇಕಾನಂದರ ಆದರ್ಶ ವಿಚಾರಧಾರೆಗಳನ್ನು ಸುತ್ತಲಿನ ಶಾಲಾಕಾಲೇಜುಗಳಲ್ಲಿ ಪ್ರವಚನಗಳ ಮೂಲಕ ಪಸರಿಸಿದರು. ಅವರು ಶಾಸ್ತ್ರವೇತ್ತರೂ ಶ್ರೇಷ್ಠ ಲೇಖಕರೂ ಆಗಿದ್ದುದರಿಂದ ಅನೇಕ ಶಾಸ್ತ್ರಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಕನ್ನಡಿಗರಿಗೆ ಮಹದುಪಕಾರ ಮಾಡಿರುವರು. ಮಠವು ಹಂತಹಂತವಾಗಿ ಬೆಳೆಯತೊಡಗಿತು. ೧೯೫೮ ರಲ್ಲಿ ಉಚಿತ ಚಿಕಿತ್ಸಾಲಯ ಪ್ರಾರಂಭವಾಯಿತು. ೧೯೬೩ ರಲ್ಲಿ ಬಾಲಕಾಶ್ರಮದ ಸ್ವಂತ ಕಟ್ಟಡ ನಿರ್ಮಾಣವಾಯಿತು. ೧೯೬೬ ರಲ್ಲಿ ಸ್ವಾಮಿ ವಿಜ್ಞಾನಂದಜಿಯವರು ಅಧ್ಯಕ್ಷರಾಗಿ ಸೇವಾ ಕೈಂಕರ್ಯ ಮುಂದುವರಿಸಿದರು. ಸ್ವಾಮಿ ಆದಿದೇವಾನಂದರ ಕಾಲದಿಂದಲೂ ಬಾಲಕಾಶ್ರಮದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ ಸ್ವಾಮಿ ಸುಂದಾನಂದಜಿಯವರು “ವಾರ್ಡನ್ ಸ್ವಾಮೀಜಿ” ಎಂದೇ ಖ್ಯಾತರಾಗಿದ್ದರು. ತಮ್ಮ ಪಿತೃಸಹಜ ಪ್ರೀತಿಯ ಮೂಲಕವೂ ಅಪಾರ ಜ್ಞಾನ ಸಂಪತ್ತಿನ ಮೂಲಕವೂ ಅವರು ಬಾಲಕಾಶ್ರಮದ ಮಕ್ಕಳನ್ನು ಸ್ಫೂರ್ತಿಗೊಳಿಸಿದರಲ್ಲದೆ, ಆಶ್ರಮದ ತೋಟಕ್ಕೆ ವಿಶೇಷ

ಮೆರುಗು ನೀಡಿದರು. ೧೯೮೭ರಲ್ಲಿ ಸುಂದಾನಂದಜಿಯವರು ಮಠದ ಅಧ್ಯಕ್ಷರಾದ ಮೇಲೆ, ಬಾಲಕಾಶ್ರಮದ ಮೇಲ್ವಿಚಾರಣೆಯನ್ನು ವಹಿಸಿಕೊಂಡ ಸ್ವಾಮಿ ಜಿತಕಾಮಾನಂದಜಿಯವರು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಬಹಳಷ್ಟು ಶ್ರಮಪಟ್ಟಿದ್ದಾರೆ. ಬಳಿಕ ೧೯೯೮ರಿಂದ ಆಶ್ರಮವು ಸ್ವಾಮಿ ಪೂರ್ಣಕಾಮಾನಂದಜಿ ಅವರ ಅಧ್ಯಕ್ಷತೆಯಲ್ಲಿ ಮುನ್ನಡೆಯುತ್ತಿದೆ. ಈಗ ಸ್ವಾಮಿ ಮುಕ್ತಿಪದಾನಂದಜಿಯವರು ಬಾಲಕಾಶ್ರಮದ ಮೇಲ್ವಿಚಾರಣೆಯನ್ನು ಯಶಸ್ವಿಯಾಗಿ ನೋಡಿಕೊಳ್ಳುತ್ತಿದ್ದಾರೆ.

ಸದ್ಯ ರಾಮಕೃಷ್ಣ ಮಠವು ಆಧ್ಯಾತ್ಮಿಕ ಶಿಬಿರಗಳು, ವ್ಯಕ್ತಿತ್ವ ನಿರ್ಮಾಣ ಶಿಬಿರಗಳು, ಯೋಗಾಸನ ಶಿಬಿರಗಳು ಮುಂತಾದ ಧಾರ್ಮಿಕ. ಆಧ್ಯಾತ್ಮಿಕ ಕಾರ್ಯಕ್ರಮಗಳಿಗಾಗಿ ಸುಸಜ್ಜಿತ ಸಭಾಭವನ, ಗ್ರಂಥಾಲಯಗಳನ್ನು ಒಳಗೊಂಡಿದೆ. ಮಠದ ಕಾರ್ಯಕ್ಷೇತ್ರ ಕ್ರಮೇಣ ವಿಸ್ತಾರವಾಗುತ್ತಿದೆ. ಹಿಂದೆ ಮಣ್ಣಗುಡ್ಡದಲ್ಲಿ ಚಿಕ್ಕ ಮಕ್ಕಳಿಗಾಗಿ ನಡೆಯುತ್ತಿದ್ದ ಬಾಲವೃಂದ ಎಂಬ ಕಾರ್ಯಕ್ರಮ ಈಗ ಮಠದ ಆವರಣದಲ್ಲಿಯೆ ತುಂಬ ಯಶಸ್ವಿಯಾಗಿ ನಡೆಯುತ್ತಿದೆ.

**ಯಾರು ಅರ್ಹರು?**: ಕಷ್ಟಪಟ್ಟು ಓದುವ ಹಂಬಲವಿದೆ; ಉತ್ತಮ ಅಂಕ ಗಳಿಸುವ ಸಾಮರ್ಥ್ಯ ಇದೆ, ಸ್ವಾವಲಂಬಿ ಜೀವನದ ಮೂಲಕ ಸಮಾಜದಲ್ಲಿ ಗುರುತಿಸಿಕೊಳ್ಳಬೇಕೆಂಬ ತುಡಿತವಿದೆ, ಆದರೆ ವಿದ್ಯಾಭ್ಯಾಸ ಮುಂದುವರಿಸಲು ಆರ್ಥಿಕ ಕೊರತೆ ಕಾಡುತ್ತಿದೆ, ಇದಲ್ಲದೆ ಸೂಕ್ತ ಮಾರ್ಗದರ್ಶನದ ಕೊರತೆ ಇದೆ—ಈ ಸಮಸ್ಯೆಗಳಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶವಿದೆ.

ಪ್ರತಿವರ್ಷ ಕನ್ನಡ ಮಾಧ್ಯಮದ ಎಂಟನೇ ತರಗತಿಯ ಸೇರ್ಪಡೆಗೆ ಇಲ್ಲಿ ವಿದ್ಯಾರ್ಥಿಗಳಿಗೆ ಅವಕಾಶವಿದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ, ಏಳನೇ ತರಗತಿಯಲ್ಲಿ ಶೇ ೭೦ಕ್ಕಿಂತ ಹೆಚ್ಚು ಅಂಕಗಳೊಂದಿಗೆ ತೇರ್ಗಡೆಯಾದ, ಆರ್ಥಿಕವಾಗಿ ಹಿಂದುಳಿದ, ಗ್ರಾಮೀಣ ಬುದ್ಧಿವಂತ ಬಾಲಕರಿಗೆ ಆದ್ಯತೆ ನೀಡಲಾಗುತ್ತದೆ. ಕಷ್ಟಪಟ್ಟು ವಿದ್ಯಾರ್ಜನೆ ಮಾಡಬೇಕೆಂಬ ಛಲವೇ ಅವರಲ್ಲಿರಬೇಕಾದ ಅರ್ಹತೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮಂಗಳೂರಿನ ಪ್ರತಿಷ್ಠಿತ ಶಾಲೆಯಾದ ಕಾಸ್ಸಿಯಾ ಪ್ರೌಢಶಾಲೆಯಲ್ಲಿ ವಿದ್ಯಾರ್ಜನೆಗೆ ಅವಕಾಶ ದೊರೆಯುತ್ತದೆ.

**ಆಯ್ಕೆ**: ಪ್ರವೇಶ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ವಾರ್ಷಿಕ ಹಾಗೂ ಅರ್ಧವಾರ್ಷಿಕ ಪರೀಕ್ಷೆಯ ಅಂಕಪಟ್ಟಿಗಳೊಂದಿಗೆ ಹೆತ್ತವರ ಜತೆ ಏಪ್ರಿಲ್ ತಿಂಗಳಲ್ಲಿ ಆಶ್ರಮದಲ್ಲಿರುವ ವಾರ್ಡನ್ ಸ್ವಾಮೀಜಿ ಅವರನ್ನು ಸಂಪರ್ಕಿಸಬೇಕು. ಬಳಿಕ ನಿಗದಿತ ದಿನದಂದು ಏಳನೇ ತರಗತಿಯ ಗಣಿತ, ವಿಜ್ಞಾನ, ಇಂಗ್ಲಿಷ್, ಹಿಂದಿ ಮತ್ತು ಸಾಮಾನ್ಯ ವಿಷಯಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಅದರಲ್ಲಿ ದೊರೆತ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ.

**ಅವಕಾಶಗಳು**: ಉತ್ತಮರೆಂದು ಹೆಸರುಗಳಿಸಿದ ವಿದ್ಯಾರ್ಥಿಗಳ ಶಾಲಾ ಶುಲ್ಕವನ್ನೂ ಆಶ್ರಮವೇ ಭರಿಸುತ್ತದೆ. ವಾರ್ಷಿಕ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ, ವರ್ಷದ ಅತ್ಯುತ್ತಮ ನಡತೆಯ ವಿದ್ಯಾರ್ಥಿ, ಅತ್ಯುತ್ತಮ ಯೋಗಾಭ್ಯಾಸ ಪಟುಗಳಿಗೆ ಮಾತ್ರವಲ್ಲದೆ, ಭಾಷಣ, ಪ್ರಬಂಧ, ಚಿತ್ರಕಲೆ, ಅಭಿನಯ, ಭಜನೆ ಮತ್ತು ಗೀತಾ ಕಂಠಪಾಠ ಮುಂತಾದ ಪಠ್ಯೇತರ ಚಟುವಟಿಕೆಗಳಲ್ಲಿಯೂ ಪ್ರತಿವರ್ಷ ಬಹುಮಾನಗಳನ್ನು ನೀಡಲಾಗುತ್ತದೆ. ಈ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಪ್ರೇರಣೆ ನೀಡಲಾಗುತ್ತದೆ. ಇದಲ್ಲದೆ ನುರಿತ ಅಧ್ಯಾಪಕರಿಂದ ಕೋಚಿಂಗ್ ಸೌಲಭ್ಯವೂ ದೊರೆಯುತ್ತಿದ್ದು, ಶಿಕ್ಷಣಾರ್ಥಿಗಳಿಗೆ ಇದು ಅತ್ಯುತ್ತಮ ತಾಣವಾಗಿದೆ.

**ಸೌಲಭ್ಯಗಳು**: ಬಾಲಕಾಶ್ರಮವು ವಿದ್ಯಾರ್ಥಿಗಳಿಗೆ ಓದಲು ಸುಸಜ್ಜಿತ ಸ್ಟಡಿ ಹಾಲ್, ಮಲಗಲು ಸುವ್ಯವಸ್ಥಿತ ವಿಶಾಲವಾದ ಕೊಠಡಿ, ಡೈನಿಂಗ್ ಹಾಲ್, ಕಿಚನ್, ಬಟ್ಟೆ ಒಣಗಿಸಲು ಸುವಿಶಾಲ ಸ್ಥಳ, ಆಟದ ಮೈದಾನ, ಪ್ರಾರ್ಥನಾಮಂದಿರ, ಸಭಾಂಗಣ, ಅತ್ಯುತ್ತಮ ಗ್ರಂಥಭಂಡಾರ ಮುಂತಾದ ಸೌಲಭ್ಯ, ಸವಲತ್ತುಗಳನ್ನು ಹೊಂದಿದೆ.

**ವೇಳಾಪಟ್ಟಿ**: ಶ್ರೀರಾಮಕೃಷ್ಣ ಮಿಷನ್ ಬಾಲಕಾಶ್ರಮದ ವೇಳಾಪಟ್ಟಿಯೂ ಒಬ್ಬ ಮಾದರಿ ವಿದ್ಯಾರ್ಥಿಗೆ ದೊರೆಯಬಹುದಾದ ಎಲ್ಲ ಅವಕಾಶಗಳನ್ನೂ ನೀಡುತ್ತದೆ. ಬೆಳಗ್ಗೆ ಏಳುವುದರಿಂದ ಹಿಡಿದು, ಸ್ನಾನ, ಶೌಚಾದಿಗಳು, ಯೋಗಾಭ್ಯಾಸ, ಭಜನೆ, ಸಂಧ್ಯಾವಂದನೆ, ದೈನಂದಿನ ಕೆಲಸಗಳು, ಓದು, ಊಟ-ಉಪಾಹಾರ, ವಿಶ್ರಾಂತಿ ಎಲ್ಲದರಲ್ಲೂ ಶಿಸ್ತುಪಾಲನೆ, ಸಮಯ ಪಾಲನೆಗೆ ಆದ್ಯತೆ ನೀಡಿರುವುದು ಕಂಡುಬರುತ್ತದೆ. ಇದು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ ಎಂಬುದು ಅನುಭವಿಗಳ ನುಡಿ.

ಬಾಲಕಾಶ್ರಮದಲ್ಲಿ ಓದಿದ ವಿದ್ಯಾರ್ಥಿಗಳ ಮುಂದಿನ ಭವಿಷ್ಯದ ಕಡೆಗೂ ವಿಶೇಷ ಗಮನ ನೀಡಲಾಗುತ್ತದೆ. ಉನ್ನತ ವೃತ್ತಿಶಿಕ್ಷಣಕ್ಕೆ ಹೋಗಬಯಸುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡುವುದಕ್ಕಾಗಿ ಒಂದು ನಿಧಿಯನ್ನೇ ರೂಪಿಸಲಾಗಿದೆ. ಅದರ ಪ್ರಯೋಜನವನ್ನು ಪಡೆದು ಅನೇಕ ವಿದ್ಯಾರ್ಥಿಗಳು ಪ್ರಸಿದ್ಧ ಶಿಕ್ಷಣ ಸಂಸ್ಥೆಗಳಲ್ಲಿ ತಮ್ಮ ಉನ್ನತ ಶಿಕ್ಷಣವನ್ನು ಮುಂದುವರಿಸಿ ಈಗ ವಿವಿಧ ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಉದ್ಯೋಗಸ್ಥರಾಗಿ ಯಶಸ್ವಿ ಜೀವನ ನಡೆಸುತ್ತಿದ್ದಾರೆ.

ಬಾಲಕಾಶ್ರಮದಲ್ಲಿ ಶಿಕ್ಷಣವನ್ನು ಪಡೆದು ಜೀವನ ಸಾರ್ಥಕತೆಯನ್ನು ಪಡೆದ ಹಳೆಯ ವಿದ್ಯಾರ್ಥಿಗಳು ತಮ್ಮದೇ ಆದ ಒಂದು ಸಂಘವನ್ನು ನಿರ್ಮಿಸಿಕೊಂಡು ವಿವಿಧ ಸೇವಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

(ಲೇಖಕ : ಪಿ. ಅವಿನಾಶ್, ಬಾಲಕಾಶ್ರಮದ ಹಳೆಯ ವಿದ್ಯಾರ್ಥಿ)